## ಶಾಸನಗಳ ಜಾತ್ರೆ!

ಶಾಸನಗಳನ್ನು ಗತಕಾಲದ ಬದುಕಿನ ದಾಖಲೆ ಎನ್ನುತ್ತೇವೆ. ಸಾಮಾನ್ಯವಾಗಿ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವ ದೇವಸ್ಥಾನ, ಕೋಟೆ, ಬಸದಿಗಳಲ್ಲಿ ಶಾಸನಗಳು ಕಂಡುಬರುತ್ತವೆ. ಉತ್ತರಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ನಗರಬಸ್ತಿಕೇರಿಯಲ್ಲಿ ಕಾಳುಮೆಣಸಿನ ರಾಣಿ ಚೆನ್ನಭೈರಾದೇವಿ ಕಟ್ಟಿಸಿದ ಚತುರ್ಮುಖ ಜೈನ ಬಸದಿಗೆ ಭೇಟಿ ನೀಡಿದಾಗ ನೀವು ಈ ಶಾಸನಗಳನ್ನು ಕಾಣಬಹುದು. ಹಲವು ಶಾಸನಗಳನ್ನು ಸಾಲಾಗಿ ನಿಲ್ಲಿಸಿರುವುದರಿಂದ ನೋಡುಗರಿಗೆ 'ಶಾಸನಗಳ ಜಾತ್ರೆ' ಎಂದು ಅನಿಸದೇ ಇರಲಾರದು.

—ಎಂ.ಎಸ್. ಶೋಭಿತ್ ಮೂಡ್ಕಣಿ





## ಕೋಲು ಜೇನು

ಇದನ್ನು ಕಿರು ಜೇನು, ಕಡ್ಡಿ ಜೇನು (ಎಪಿಸ್ ಫ್ಲೋರಿಯ) ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಇದು ಹಳ್ಳಿ ಪ್ರದೇಶಗಳಲ್ಲಿ ತುಂಬಾ ಜನಪ್ರಿಯ ತಳಿ. ಗಾತ್ರದಲ್ಲಿ ಇವು ಹೆಜ್ಜೇನು ಮತ್ತು ತುಡುವೆ ಜೇನು ಹುಳುಗಳಿಗಿಂತಲು ಚಿಕ್ಕವು. ಕಡ್ಡಿಗಾತ್ರದ ಆಶ್ರಯ ಸಿಕ್ಕರೂ ಅಲ್ಲೊಂದು ಗೂಡನ್ನು ಇವು ಕಟ್ಟುತ್ತವೆ. ಗೋಡೆಗಳ ಸಂಧಿ ಆದರೂ ಆದೀತು. ಒಟ್ಟಾರೆ ಪುಟ್ಟ ಆಧಾರದಲ್ಲಿಯೇ ಗೂಡು ಕಟ್ಟುತ್ತದೆ. ದೀರ್ಘಕಾಲ ಒಂದೇ ಸ್ಥಳದಲ್ಲಿ ಹೆಚ್ಚು ಸಮಯ ಇರುವುದಿಲ್ಲ. ಒಂದು ಕೆ.ಜಿ.ಗಿಂತ ಹೆಚ್ಚು ಜೇನು ಸಂಗ್ರಹಿಸುವುದಿಲ್ಲ.

—ಸಂಗೀತ ರವಿರಾಜ್

## ಜೋಡಿ ಮರಿ ಜೊತೆ ಜೋಡಿ ಹಕ್ಕಿ ಪರಾರಿ

ನನ್ನ ಮನೆಯ ಪಕ್ಕದ ಮನೆಯ ಟೆರೇಸ್‌ನಲ್ಲಿದ್ದ ಹೂಕುಂಡದ ಸಮೀಪದಲ್ಲಿ ಬುಲ್ ಬುಲ್ ಹಕ್ಕಿ ಜೋಡಿಯೊಂದು ಬಹಳ ಸಡಗರದಿಂದ ಬಂದೂ ಹೋಗಿ ಮಾಡುತ್ತಿದ್ದವು. ಜನರೆಂದರೆ ಭಯವಿಲ್ಲದ ಆ ಪುಟ್ಟ ಹಕ್ಕಿಗಳು ಗೂಡನ್ನು ಕಟ್ಟುತ್ತಿದ್ದವು. ಕೆಲವು ದಿನಗಳ ನಂತರ ಬಟ್ಟಲಿನ ಆಕಾರದ ಗೂಡೊಂದು ತಯಾರಾಯಿತು. ಅದರಲ್ಲಿ ಎರಡು ನಸುಗುಲಾಬಿ ಬಣ್ಣದ ಕಪ್ಪುಚುಕ್ಕೆಗಳಿಂದ ಕೂಡಿದ ಮೊಟ್ಟೆಗಳು ಕಂಡುಬಂದಿತು. ಸರದಿಯ ಮೇಲೆ ಕಾವುಕೊಟ್ಟು ಜೋಪಾನ ಮಾಡಿದವು. ಹದಿನೈದು ಇಪ್ಪತ್ತು ದಿನಗಳ ನಂತರ ಮೊಟ್ಟೆಯೊಡೆದು ಮರಿಗಳಾಯಿತು. ಕೆಲ ದಿನಗಳ ನಂತರ ಗೂಡು ಖಾಲಿ ಮಾಡಿಕೊಂಡು ಮರಿಗಳ ಜೊತೆ ಹಾರಿಹೋಗಿವೆ.

—ಪದ್ಮಲಲಿತ

